ಹಿರಾಶುಗರ ತಾಂತ್ರಿಕ ಮಹಾವಿದ್ಯಾಲಯ, ನಿಡಸೋಸಿ

**Hirasugar Institute of Technology**

**Nidasoshi – 591 236, Karnataka State**

Ref: No. HSIT/NDS/Covid-19/2021-22/65 date : 21-04-2021

# ಸುತ್ತೋಲೆ

ಈ ಮೂಲಕ ಎಲ್ಲ ಸಿಬ್ಬಂದಿಯವರಿಗೆ ತಿಳಿಸುವುದೇನೆಂದರೆ ವಿ.ತಾ.ವಿ. ಪತ್ರ ಸಂಖ್ಯೆ: ವಿ.ಟಿ.ಯು./ಪಿಎಸ್/2020–21/367 ದಿನಾಂಕ 21–04–2021 ರ ನಿರ್ದೇಶನದ ಪ್ರಕಾರ ಕರ್ನಾಟಕ ಸರ್ಕಾರ ದಿನಾಂಕ 20–04–2021 ರಂದು ಬಿಡುಗಡೆಗೊಳಿಸಿದ ಕೋವಿಡ–19ರ ಮಾರ್ಗಸೂಚಿಗಳನ್ನು ಹಾಗೂ ಈ ಕೆಳಗಿನ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ತಿಳಿಸಲಾಗಿದೆ.

| | |
|---|---|
| 1. | ದಿನಾಂಕ 21–04–2021 ರಿಂದ ಅನ್ವಯವಾಗುವಂತೆ ಮುಂದಿನ ಆದೇಶದವರೆಗೆ ಎಲ್ಲ ಪಾಠಪ್ರವಚನಗಳನ್ನು ಕಡ್ಡಾಯವಾಗಿ ಆನ್‌ಲಾಯಿನ ಮೂಲಕ ನಡೆಸುವುದು. |
| 2. | ಕಡ್ಡಾಯವಾಗಿ ಮಾಸ್ಕ ಧರಿಸುವುದು, ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಮತ್ತು ಸ್ಯಾನಿಟೈಸರ್ ಬಳಸುವುದು. |
| 3. | ಅನಾವಶ್ಯಕವಾಗಿ ಕ್ಯಾಂಪಸಿನ ಒಳಗೆ ಬರುವುದನ್ನು ಮತ್ತು ಹೊರಗೆ ಹೋಗುವದನ್ನು ನಿಷೇಧಿಸಲಾಗಿದೆ. |
| 4. | ಯಾವುದೇ ಸಿಬ್ಬಂದಿಯು ಕಾರ್ಯಾಲಯದ ಅಧಿಕೃತ ಅನುಮತಿ ಪಡೆಯದೇ ಹೆಡ್ ಕ್ವಾಟರ್ಸನ್ನು ಬಿಟ್ಟು ಹೋಗುವದಾಗಲೀ ಅಥವಾ ಹೊರಗಿನವರನ್ನು ಇಲ್ಲಿ ಕರೆಯಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. |
| 5. | ರಾತ್ರಿ 9.00 ರಿಂದ ಬೆಳ್ಳಿಗೆ 6.00 ರವರೆಗೆ ಕ್ಯಾಂಪಸಿನ ಹೊರಗೆ ಹೋಗುವದನ್ನು ಮತ್ತು ಒಳಗೆ ಬರುವದನ್ನು ನಿಷೇಧಿಸಲಾಗಿದೆ. |
| 6. | ಯಾವುದೇ ಸಾರ್ವಜನಿಕ ಸಭೆ, ಸಮಾರಂಭಗಳಿಗೆ, ಮದುವೆ ಮತ್ತು ಜಾತ್ರೆ ಇತ್ಯಾದಿಗಳಲ್ಲಿ ಭಾಗವಹಿಸುವದರಿಂದ ಸಾಧ್ಯವಿದ್ದಷ್ಟು ದೂರ ಉಳಿಯಬೇಕೆಂದು ತಿಳಿಸಲಾಗಿದೆ. |
| 7. | ಕ್ಯಾಂಪಸಿನಲ್ಲಿ ವಾಸಿಸುವರಿಗೆ ದಿನನಿತ್ಯ ಅವಶ್ಯವಿರುವ ಕಿರಾಣಿ ಮತ್ತು ಕಾಯಿಪಲ್ಲೆ ಇತ್ಯಾದಿಗಳನ್ನು ಖರೀದಿಸಲು ವಾರದಲ್ಲಿ ಗರಿಷ್ಠ ಎರಡು ಸಲ ಮಾತ್ರ ಅವಕಾಶ ನೀಡಲಾಗಿದೆ. |
| 8. | ಕ್ಯಾಂಪಸಿನಲ್ಲಿ ವಾಸಿಸುವ ಯಾವುದೇ ಸಿಬ್ಬಂದಿಯು ತಮ್ಮ ತಂದೆ–ತಾಯಿಯನ್ನು ಹೊರತುಪಡಿಸಿ ಇತರೇ ಸಂಬಂಧಿಕರನು ಇಟ್ಟುಕೊಳ್ಳುವುದನ್ನು ಮತ್ತು ಬಂದು ಹೋಗುವದನ್ನು ನಿಷೇಧಿಸಲಾಗಿದೆ. |
| 9. | ಎಲ್ಲ ಅರ್ಹ ಸಿಬ್ಬಂದಿಯವರು ಕಡ್ಡಾಯವಾಗಿ ವ್ಯಾಕ್ಸಿನ್ ಹಾಕಿಸಿಕೊಳ್ಳಬೇಕು. |

ಇದಲ್ಲದೇ ಕಾಲಕಾಲಕ್ಕೆ ಹೊರಡಿಸುವ ಎಲ್ಲ ನಿಯಮಾವಳಿಗಳನ್ನು ಹಾಗೂ ಸೂಚನೆಗಳನ್ನು ಚಾಚೂತಪ್ಪದೇ ಪಾಲಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ ಹಾಗೂ ತಪ್ಪಿದಲ್ಲಿ ಶಿಸ್ತು ಕ್ರಮ ಕೈಕೊಳ್ಳಲಾಗುವುದು.

21/4/21

ಡಾ. ಎಸ್.ಸಿ.ಕಮತೆ
ಪ್ರಾಂಶುಪಾಲರು

ಪ್ರತಿ:1) ಎಲ್ಲ ಸಿಬ್ಬಂದಿಯವರ ಮಾಹಿತಿಗಾಗಿ

2) ಎಲ್ಲ ವಿಭಾಗದ ಮುಖ್ಯಸ್ಥರ ಮಾಹಿತಿಗಾಗಿ

3) ಮಾನ್ಯ ಕಾರ್ಯದರ್ಶಿಗಳು, ಎಸ್.ಜೆ.ಪಿ.ಎನ್.ಟ್ರಸ್ಟ, ನಿಡಸೋಸಿ ಇವರ ಮಾಹಿತಿಗಾಗಿ

4) ಆಫೀಸ ಪ್ರತಿ